ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳತಕ್ಕಂಥ ವಿಷಯ ನಮಗೆ ಗೊತ್ತಿಲ್ಲ. ಜೊತೆಗೆ ನಮ್ಮಲ್ಲಿ ಖರಾಬ್ ಜಮೀನು ಇದ್ದಾಗ ಅದನ್ನು ನಿವೇಶನ ಇಲ್ಲದವರಿಗೆ ಕೊಟ್ಟಿದ್ದೇವೆ. ಅದಕ್ಕೆ ಬೇರೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲ.

X-Ray Facilities in Civil Hospital, Dharwar

(434) SRI BHAVU RAO DESHPANDE (Dharwar).—Will the Minister for Health and Family Welfare be pleased to state :—

(*a*) whether it has come to the notice of Government that there is no X-Ray facilities in Civil hospital, Dharwar ;

(*b*) if so, when the Government proposes to provide the essential facility ?

SRI M. MALLAPPA (Minister for Health and Family Welfare).—

(*a*) Yes.

(*b*) It will be provided shortly.

ಶ್ರೀ ಭಾವೂರಾವ್‌ದೇಶಪಾಂಡೆ.—''ಧಾರವಾಡದ ಸಿವಿಲ್ ಆಸ್ಪತ್ರೆಯಲ್ಲಿ ಎಕ್ಸರೇ ಸೌಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ'' ಎಂದು ಕೇಳಿದ್ದಕ್ಕೆ, ''ಬಂದಿದೆ'' ಯೆಂದು ಒಪ್ಪಿಕೊಂಡಿದ್ದಾರೆ.ಆದರೆ ಅದಕ್ಕೆ ಪರಿಹಾರದ ಬಗ್ಗೆ ಅಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಕೇಳುವಂತಾದ್ದು ಒಂದು ಜಿಲ್ಲೆಯ ಕೇಂದ್ರದಲ್ಲಿ ಇರತಕ್ಕಂಥ ದೊಡ್ಡ ಆಸ್ಪತ್ರೆಯಲ್ಲಿ ಎಕ್ಸರೇ ಸೌಲಭ್ಯ ಇಲ್ಲದಿರುವುದು ಮನವರಿಕೆಯಾಗಿರುವುದರಿಂದ ಅಲ್ಲಿಗೆ ಎಕ್ಸರೇ ತರಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ? ಹಾಗೂ ಅದಕ್ಕೆ ಅಂದಾಜನ್ನು ತಯಾರಿಸಿದ್ದಾರೆಯೇ ? ಎಷ್ಟು ದಿವಸಗಳಲ್ಲಿ ಅದನ್ನು ಒದಗಿಸುತ್ತೀರಿ ?

ಶ್ರೀ ಎಂ. ಮಲ್ಲಪ್ಪ.—ಧಾರ್‌ವಾಡ್ ಸಿವಿಲ್ ಆಸ್ಪತ್ರೆಯಲ್ಲಿ ಎಕ್ಸರೇ ಮೆಷಿನ್ ಇದ್ದು ಅದು ಕೆಲಸ ಮಾಡುತ್ತಿದೆ ಅದನ್ನು ರಿಪೇರಿ ಮಾಡಿಸಲು ಹೆಚ್ಚು ಹಣ ಖರ್ಚಾಗುತ್ತದೆಂದು ತಿಳಿದು ಅದಕ್ಕೆ ಬದಲಾಗಿ ಬೇರೆ ಒದಗಿಸ ಬೇಕೆಂದು ಸರ್ಕಾರ ಈಗಾಗಲೇ ಯೋಚನೆ ಮಾಡಿದೆ. ಅದನ್ನು ಆದ್ದರಿಂದ ಆದಷ್ಟು ಬೇಗ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ಹಳೆಯ ಮೆಷಿನ್ ಕೆಟ್ಟಿರುವುದರಿಂದ ಅದನ್ನು ಮತ್ತೆ ಸರಿಪಡಿಸುತ್ತೀರಾ ?

ಶ್ರೀ ಎಂ. ಮಲ್ಲಪ್ಪ.— ಹೊಸದು ತರಿಸಿ ಅಲ್ಲಿಗೆ ಕಳುಹಿಸಿ ಎಕ್ಸರೇ ವ್ಯವಸ್ಥೆಯನ್ನು ಮಾಡಿಸುತ್ತೇವೆ.

1-00 P. M.

Kannadiga Workers in Hatti Gold Mines

(456) SRI M. GANGANNA ((Kustagi).—Will the Chief Minister be pleased to state :—

(*a*) the number of Kannadigas and persons belonging to Raichur district among staff of the mining operations in Hatti Gold Mines